ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ವೀಧಿ,

ಬೆಂಗಳೂರು-560001 ದೂ 080 22864681 / 22864732

ಪ್ರಕಟಣೆ ಸಂಖ್ಯೆ:ಮೀನಿ:ತಾಂತ್ರಿಕ :ಆರ್‌ಎಫ್‌ಡಿ:04:2020ಇ-300142 ದಿ :09-07-2020

**ಮೀನುಮರಿ ಸರಬರಾಜಿಗೆ ಆಸಕ್ತಿ ವ್ಯಕ್ತಪಡಿಸುವಿಕೆ**

2020-21 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರಾಜ್ಯದ ಜಲಾಶಯಗಳಿಗೆ ಸುಮಾರು 150.00ಲಕ್ಷ ಸಂಖ್ಯೆಯ 80-100 ಮೀ.ಮೀ ಗಾತ್ರದ ಬಲಿತ ಬಿತ್ತನೆ ಮೀನುಮರಿಗಳನ್ನು ಸರ್ಕಾರ ಈ ಕೆಳಕಂಡಂತೆ ನಿಗದಿಪಡಿಸಿರುವ ದರಗಳಲ್ಲಿ (ಸಾಗಾಣಿಕೆ ವೆಚ್ಚ ಹೊರಡುಪಡಿಸಿ) ಸರಬರಾಜು ಮಾಡಲು ಮೀನುಗಾರಿಕಾ ಇಲಾಖೆಯಲ್ಲಿ ನೊಂದಾಯಿಸಿರುವ ಆಸಕ್ತ ಮೀನುಮರಿ ಸರಬರಾಜುದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ಮತ್ತು ಷರತ್ತು ನಿಬಂಧನೆಗಳ ನಮೂನೆಗಳನ್ನು ಮೀನುಗಾರಿಕೆ ನಿರ್ದೇಶನಾಲಯದಲ್ಲಿ ಅಥವಾ ಇಲಾಖೆಯ ಕಛೇರಿಗಳಲ್ಲಿ ಹಾಗೂ ಅಂತರ್ಜಾಲ WWW.karnataka.gov.in/fisheries ನಲ್ಲಿ ದಿ :10-07-2020 ರಿಂದ ಪಡೆಯಬಹುದು ಅರ್ಜಿ ನಮೂನೆ ಸಲ್ಲಿಸಲು ಕಡೆಯ ದಿ:14-08-2020 ಸಂಜೆ 5.00 ಗಂಟೆ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ

ಅರ್ಜಿ ಸಲ್ಲಿಸಬೇಕಾದ ವಿಳಾಸ : ಸಂಬಂಧಿಸಿದ ವಲಯ ಮಟ್ಟದ ಮೀನುಗಾರಿಕೆ ಉಪನಿರ್ದೇಶಕರ ಕಛೇರಿ

| ಅರ್ಜಿ ಸಲ್ಲಿಸಬೇಕಾದ ಕಛೇರಿ ವಿಳಾಸ | ದೂರವಾಣಿ | ಸಂಬಂಧಪಟ್ಟ ಜಿಲ್ಲೆಗಳು |
|---|---|---|
| ಮೀನುಗಾರಿಕೆ ಉಪನಿರ್ದೇಶಕರು, , ಬಿ.ಹೆಚ್.ರಸ್ತೆ, ಶಿವಮೊಗ್ಗ 577201 | 08182-223259 | ಶಿವಮೊಗ್ಗ ದಾವಣಗೆರೆ, ಚಿಕ್ಕಮಗಳೂರು, ಚಿತ್ರದುರ್ಗ |
| ಮೀನುಗಾರಿಕೆ ಉಪನಿರ್ದೇಶಕರು, ಮತ್ಸ್ಯ ಭವನ ಕ್ರಿಕೆಟ್ ಸ್ಟೇಡಿಯಂ ಹತ್ತಿರ ರಾಮತೀರ್ಥನಗರ, ಸದಾಶಿವನಗರ, ಬೆಳಗಾವಿ-590015 | 0831-2472468 | ಬೆಳಗಾವಿ ಧಾರವಾಡ, ಗದಗ, ಹಾವೇರಿ ಬಾಗಲಕೋಟೆ, ಬಿಜಾಪುರ |
| ಮೀನುಗಾರಿಕೆ ಉಪನಿರ್ದೇಶಕರು,, ನಂ.891, ಇ ಮತ್ತು ಎಫ್ ಬ್ಲಾಕ್, ಅಗ್ನಿಹಂಸ ರಸ್ತೆ, ಕುವೆಂಪುನಗರ, ಮೈಸೂರು-570023 | 0821-25414424 | ಮೈಸೂರು ಹಾಸನ ಕೊಡಗು, ಚಾಮರಾಜನಗರ, ಮಂಡ್ಯ |
| ಮೀನುಗಾರಿಕೆ ಉಪನಿರ್ದೇಶಕರು, ಹೊಸಪೇಟೆ ರಸ್ತೆ, ನಾಗರಕೆರೆ ಹತ್ತಿರ, ಬಳ್ಳಾರಿ 583 102 | 0839-2242638 | ಬಳ್ಳಾರಿ ಕೊಪ್ಪಳ, ರಾಯಚೂರು, ಗುಲ್ಬರ್ಗ, ಯಾದಗಿರಿ, ಬೀದರ್ |
| ಮೀನುಗಾರಿಕೆ ಉಪನಿರ್ದೇಶಕರು, ಅಲಿಗದ್ದ ಬೈತಕೋಲ್, ಕಾರವಾರ 581301 | 08382-221407 | ಉತ್ತರ ಕನ್ನಡ |
| ಮೀನುಗಾರಿಕೆ ಉಪನಿರ್ದೇಶಕರು, ನಂ.8 ಮಹಾವೀರ ಕಾಂಪ್ಲೆಕ್ಸ್, ಕೆ.ಜಿ.ರಸ್ತೆ, ಬೆಂಗಳೂರು-09 | 080-22266637 | ಬೆಂಗಳೂರು (ನ) ಬೆಂಗಳೂರು (ಗ್ರಾ) ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ ಕೋಲಾರ |

09/07/2020

ಮೀನುಗಾರಿಕೆ ನಿರ್ದೇಶಕರು

(ವಿವರಗಳನ್ನು ಅಂತರ್ಜಾಲದ ಪ್ರಕಟಣೆಯಲ್ಲಿ ಪಡೆಯುವುದು)

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು-560001 ದೂ 080 22864681 / 22864732

ಪ್ರಕಟಣೆ ಸಂಖ್ಯೆ: ಮೀನಿ:ತಾಂತ್ರಿಕ :ಆರ್‌ಎಫ್‌ಡಿ:04:2020ಇ-300142 ದಿ :09 -07-2020

**ಮೀನುಮರಿ ಸರಬರಾಜಿಗೆ ಆಸಕ್ತಿ ವ್ಯಕ್ತಪಡಿಸುವಿಕೆ**

2020-21 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರಾಜ್ಯದ ಜಲಾಶಯಗಳಿಗೆ ಸುಮಾರು 2 ಕೋಟಿ ಸಂಖ್ಯೆಯ 80-100 ಮಿ.ಮೀ ಗಾತ್ರದ ಬಲಿತ ಬಿತ್ತನೆ ಮೀನುಮರಿಗಳನ್ನು ಸರ್ಕಾರ ಈ ಕೆಳಕಂಡಂತೆ ನಿಗದಿಪಡಿಸಿರುವ ದರಗಳಲ್ಲಿ (ಸಾಗಾಣಿಕೆ ವೆಚ್ಚ ಹೊರದುಪಡಿಸಿ) ಸರಬರಾಜು ಮಾಡಲು ಮೀನುಗಾರಿಕೆ ಇಲಾಖೆಯಲ್ಲಿ ನೊಂದಾಯಿಸಿರುವ ಆಸಕ್ತ ಮೀನುಮರಿ ಸರಬರಾಜುದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಬಲಿತ ಬಿತ್ತನೆ ಮೀನುಮರಿ ತಳಿಗಳು | ದರ ಪ್ರತಿ ಮೀನುಮರಿಗೆ (ರೂ ಗಳಲ್ಲಿ) | |
|---|---|---|---|
| | | | ನಿಗದಿತ ಅರ್ಜಿ ಮತ್ತು ಷರತ್ತು ನಿಬಂಧನೆಗಳ ನಮೂನೆಗಳನ್ನು ಮೀನುಗಾರಿಕೆ ನಿರ್ದೇಶನಾಲಯುದಲ್ಲಿ ಅಥವಾ ಇಲಾಖೆಯ ಕಛೇರಿಗಳಲ್ಲಿ ಹಾಗೂ ಅಂತರ್ಜಾಲ WWW.karnataka.gov.in/fisheries ನಲ್ಲಿ ದಿ :10-07-2020 ರಿಂದ ಪಡೆಯಬಹುದು |
| 1 | ಕಟ್ಲಾ | 0.80 | |
| 2 | ರೋಹು | 0.80 | |
| 3 | ಮೃಗಾಲ್ | 0.80 | |
| 4 | ಸಾಮಾನ್ಯಗೆಂಡೆ | 0.80 | |
| 5 | ಹುಲ್ಲುಗೆಂಡೆ | 1.00 | |
| 6 | ಬೆಳ್ಳಿಗೆಂಡೆ | 1.00 | |

ಅರ್ಜಿ ನಮೂನೆ ಸಲ್ಲಿಸಲು ಕಡೆಯ ದಿ:14.08.2020 ಸಂಜೆ 5.00 ಗಂಟೆ

ಅರ್ಜಿ ಸಲ್ಲಿಸಬೇಕಾದ ವಿಳಾಸ : ಸಂಬಂಧಿಸಿದ ವಲಯ ಮಟ್ಟದ ಮೀನುಗಾರಿಕೆ ಉಪನಿರ್ದೇಶಕರ ಕಛೇರಿ(ವಿವರಗಳನ್ನು ಅಂತರ್ಜಾಲದ ಪ್ರಕಟಣೆಯಲ್ಲಿ ಪಡೆಯುವುದು

ಮೀನುಗಾರಿಕೆ ನಿರ್ದೇಶಕರು

| ಇತ್ತೀಚಿನ ಪಾಸ್ ಪೋರ್ಟ್<br>ಅಳತೆಯ ಭಾವಚಿತ್ರ |
|---|

**<u>ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಯಡಿ 2020-21ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗುವ ಜಲಾಶಯಗಳಿಗೆ ರಾಜ್ಯದ ನೊಂದಾಯಿತ ಖಾಸಗಿ ಮೀನು ಕೃಷಿಕರಿಂದ ಬಲಿತ ಬಿತ್ತನೆ ಮೀನುಮರಿ ಸರಬರಾಜು ಮಾಡಲು ಆಸಕ್ತಿ ವ್ಯಕ್ತಪಡಿಸಲು ಸಲ್ಲಿಸಬೇಕಾದ ನಮೂನೆ</u>**

**<u>ಅರ್ಜಿ ನಮೂನೆ</u>**

<table>
<tr><td></td><td>ಹೆಸರು</td><td></td></tr>
<tr><td>1</td><td>ಸಂಪರ್ಕ ವಿಳಾಸ</td><td></td></tr>
<tr><td>2</td><td>ದೂರವಾಣಿ ಸಂಖ್ಯೆ</td><td></td></tr>
<tr><td>3</td><td>ಪರಿಶಿಷ್ಟ ಪಂಗಡ/ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು<br>ಮೊಬೈಲ್ ಸಂಖ್ಯೆ</td><td></td></tr>
<tr><td>4</td><td>ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರದ ಹೆಸರು ಮತ್ತು ವಿಳಾಸ</td><td></td></tr>
<tr><td>5</td><td>ಕೇಂದ್ರದ ನೊಂದಣಿ ಸಂಖ್ಯೆ/ದಿನಾಂಕ / (ಪ್ರತಿ ಲಗತ್ತಿಸುವುದು)</td><td></td></tr>
<tr><td>6</td><td>ಕೇಂದ್ರದ ನೊಂದಣಿ ನವೀಕರಣ ಸಂಖ್ಯೆ/ದಿನಾಂಕ/ಪ್ರತಿ ಲಗತ್ತಿಸುವುದು</td><td></td></tr>
<tr><td>7</td><td>ಕೇಂದ್ರದ ಜಲವಿಸ್ತೀರ್ಣ (ಹೆಕ್ಟೇರುಗಳಲ್ಲಿ)</td><td></td></tr>
<tr><td>8</td><td>ಕೇಂದ್ರದಲ್ಲಿ ಪಾಲನೆಗೆ ಖರೀದಿಸಿರುವ ಸ್ಪಾನ್/ಪ್ರೈ ಮೀನುಮರಿಗಳ ವಿವರಗಳು(ಸಂಖ್ಯೆ ಲಕ್ಷಗಳಲ್ಲಿ)</td><td><table>
<tr><td></td><td>ಸ್ಪಾನ್</td><td>ಪ್ರೈ</td></tr>
<tr><td>1)ಕಾಟ್ಲಾ</td><td></td><td></td></tr>
<tr><td>2)ರೋಹು</td><td></td><td></td></tr>
<tr><td>3)ಮೃಗಾಲ್</td><td></td><td></td></tr>
<tr><td>4)ಸಾಮಾನ್ಯಗೆಂಡೆ</td><td></td><td></td></tr>
<tr><td>5)ಹುಲ್ಲುಗೆಂಡೆ</td><td></td><td></td></tr>
<tr><td>ಒಟ್ಟು</td><td></td><td></td></tr>
</table></td></tr>
<tr><td>9</td><td>ಪಾಲನೆಗೆ ಬಳಸಿದ ಸ್ಪಾನ್ / ಪ್ರೈ ಮೀನುಮರಿ ಖರೀದಿಸಿದ ಕೇಂದ್ರ ವಿಳಾಸ ದಿನಾಂಕ ಮತ್ತು ವಿವರಗಳು (ಮೂಲ ದಾಖಲೆಗಳನ್ನು ನೀಡುವುದು)</td><td></td></tr>
<tr><td>10</td><td>ಬ್ಯಾಂಕ್ ಖಾತೆ ವಿವರ (ಪಾಸ್ ಪುಸ್ತಕದ ಪ್ರತಿ ಲಗತ್ತಿಸುವುದು)</td><td></td></tr>
</table>

ಮೇಲೆ ನೀಡಿರುವ ಮಾಹಿತಿಯು ನಿಜವೆಂದು ಪ್ರಮಾಣೀಕರಿಸುತ್ತೇನೆ ಹಾಗೂ ಇಲಾಖೆಯ ನಿಯಮ ಮತ್ತು ನಿಬಂಧನೆಗಳಿಗೆ ಒಪ್ಪಿ ರೂ:100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಿದ್ದೇನೆ.

ಸ್ಥಳ:

ಸರಬರಾಜುದಾರರ ಸಹಿ

**ರಾಜ್ಯದ ವಿವಿಧ ಜಲಾಶಯಗಳಿಗೆ ಬಲಿತ ಬಿತ್ತನೆ ಮೀನುಮರಿಗಳನ್ನು ಇಲಾಖೆಯಲ್ಲಿ ನೊಂದಾಯಿತ ಮೀನು ಕೃಷಿಕರಿಂದ ಖರೀದಿಸುವ ಬಗ್ಗೆ ಮುಚ್ಚಳಿಕೆ ಪತ್ರ**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಸಂಮೀ:37:ಮೀಇಯೋ:2013 ದಿ:19.09.2013 ರಲ್ಲಿ ವಿವಿಧ ತಳಿಗಳ ಬಲಿತ ಬಿತ್ತನೆ ಮೀನುಮರಿಗಳಿಗೆ ನಿಗದಿಪಡಿಸಿರುವ ದರಗಳನ್ವಯ ಬಿತ್ತನೆ ಮೀನುಮರಿಗಳನ್ನು ಸರಬರಾಜು ಮಾಡಲು ನನ್ನ / ನಮ್ಮ ಒಪ್ಪಿಗೆ ಇರುತ್ತದೆ.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಪಸಂಮೀ:04:ಮೀಇಇ:2010 ದಿ:03.02.2010 ರಂತೆ ಹಾಗೂ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:ಐಎನ್ಎಲ್/09/2012-13 ದಿ:20.07.2013ರ ನೀತಿ ನಿಯಮಗಳನ್ವಯ ನನ್ನ ಕೇಂದ್ರವನ್ನು ಸಂಬಂಧಿಸಿದ ವಲಯದ ಮೀನುಗಾರಿಕೆ ಉಪನಿರ್ದೇಶಕ ರವರ ಕಛೇರಿಯಲ್ಲಿ ನೊಂದಾಯಿಸಿ/ ನವೀಕರಣ ಮಾಡಿಕೊಂಡಿರುತ್ತೇನೆ. ಒಂದು ವೇಳೆ ಈ ರೀತಿ ನೊಂದಣಿ / ನವೀಕರಣಯಾಗದೆ ಇದ್ದಲ್ಲಿ ನನ್ನ ಅರ್ಹತೆಯನ್ನು ರದ್ದುಪಡಿಸಲು ನನ್ನ ಒಪ್ಪಿಗೆಯಿದೆ.
3. ನಾನು ಸರಬರಾಜು ಮಾಡಲು ಉದ್ದೇಶಿಸಿರುವ ಮೀನುಮರಿಗಳನ್ನು ನನ್ನ ನೊಂದಾಯಿತ ಮೀನುಮರಿ ಪಾಲನಾ ಕೇಂದ್ರದಲ್ಲಿಯೇ ಪಾಲನೆ ಮಾಡಿರುತ್ತೇನೆ
4. ಕೆಮ್ಮೀನು ಮೀನುಮರಿಗಳನ್ನು ಜಲಾಶಯ ದಾಸ್ತಾನಿಗೆ ಪರಿಗಣಿಸುವುದಿಲ್ಲವೆಂಬ ಷರತ್ತಿಗೆ ನನ್ನ ಒಪ್ಪಿಗೆ ಇದೆ.
5. ಇಲಾಖೆಯು ನಿರ್ಧರಿಸಿ ಆದೇಶಿಸುವಂತೆ ನನ್ನ ಬಳಿ ಲಭ್ಯವಿರುವ ಯಾವುದೇ ತಳಿಯನ್ನಾಗಲೀ (ಕೆಮ್ಮೀನು ಹೊರದು ಪಡಿಸಿ) ಮೇಲಿನ ಕಂಡಿಕೆ 1 ರಲ್ಲಿ ತಿಳಿಸಿರುವಂತೆ ಸರ್ಕಾರ ನಿಗದಿಪಡಿಸಿರುವ ದರದಲ್ಲಿ ರಾಜ್ಯದ ಯಾವುದೇ ಜಲಾಶಯದ ಸ್ಥಳಗಳಿಗೆ ಬಲಿತ ಬಿತ್ತನೆ ಮೀನುಮರಿಗಳನ್ನು ಸರಬರಾಜು ಮಾಡಲು ನಾನು ಸಿದ್ಧನಿದ್ದೇನೆ. ಇಲಾಖೆಯ ಲಭ್ಯವಿರುವ ಅನುದಾನದಲ್ಲಿ ಮಾತ್ರ ಸರಬರಾಜು ಮಾಡಲು ನಾನು ಸಿದ್ಧನಿದ್ದೇನೆ
6. ಸಾಗಾಣಿಕೆ ದರವನ್ನು ಪ್ರತ್ಯೇಕವಾಗಿ ದರಪಟ್ಟಿಗಳನ್ನು ಕರೆದು ಇಲಾಖೆಯು ನಿರ್ಧರಿಸಿದ ದರಗಳಲ್ಲಿ ಸರಬರಾಜು ಮಾಡಬೇಕಾಗುತ್ತದೆ. ಈ ದರಗಳಿಗೆ ನನ್ನ ಒಪ್ಪಿಗೆ ಇರುತ್ತದೆ.
7. ವಿವಿಧ ಯೋಜನೆಗಳಡಿ ದಾಸ್ತಾನು ಮಾಡಲು ಉದ್ದೇಶಿಸಿರುವ ಜಲಾಶಯಗಳಿಗೆ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ನೊಂದಾಯಿತ ಕೇಂದ್ರಗಳ ಸರಬರಾಜು ಸಾಮರ್ಥ್ಯಕ್ಕನುಗುಣವಾಗಿ ಹಾಗೂ ಎಲ್ಲಾ ನೊಂದಾಯಿತ ಕೇಂದ್ರಗಳಲ್ಲಿ ಲಭ್ಯವಿರುವ ವಿವಿಧ ತಳಿಗಳ ಮೀನುಮರಿಗಳ ಸಂಖ್ಯೆಯನ್ನು ಪರಿಗಣಿಸಿ ಇಲಾಖೆಯು ನಿಗದಿಪಡಿಸಿ ನೀಡುವ ಸರಬರಾಜು ಆದೇಶಗಳಿಗೆ ನನ್ನ ಒಪ್ಪಿಗೆಯಿರುತ್ತದೆ. ಈ ವಿಷಯದಲ್ಲಿ ಮೀನುಗಾರಿಕೆ ನಿರ್ದೇಶಕರ ತೀರ್ಮಾನವು ಅಂತಿಮವಾಗಿರುತ್ತದೆ.
8. ಮೀನುಮರಿ ಬಿತ್ತನೆ ಆದೇಶದೊಂದಿಗೆ ಇಲಾಖೆಯು ನಿಗದಿಪಡಿಸುವ ಸರಬರಾಜು ವಿಧಿ-ವಿಧಾನಗಳು ಹಾಗೂ ನಿಯಮಗಳಿಗೆ ನಾನು ಬದ್ಧನಾಗಿರುತ್ತೇನೆ.
9. ಒಂದು ವೇಳೆ ಅರ್ಜಿಯಲ್ಲಿ ನಾನು ತಪ್ಪು ಮಾಹಿತಿ ನೀಡಿರುವುದು ಯಾವುದೇ ಸಂಧರ್ಭದಲ್ಲಿ ಕಂಡು ಬಂದಲ್ಲಿ ನನ್ನ ಅರ್ಹತೆಯನ್ನು ರದ್ದುಪಡಿಸಬಹುದು ಹಾಗೂ ನನ್ನ ಕೇಂದ್ರದ ನೊಂದಣಿಯನ್ನು ರದ್ದುಪಡಿಸಬಹುದಾಗಿದೆ.
10. ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಕಾರಣಗಳಿಂದಾಗಿ ಮೀನುಮರಿಗಳನ್ನು ದಾಸ್ತಾನು ಮಾಡುವ ಕಾರ್ಯಕ್ರಮವನ್ನು ರದ್ದುಪಡಿಸುವ ಪ್ರಮೇಯ ಬಂದಲ್ಲಿ: ಮೀನುಗಾರಿಕೆ ಇಲಾಖೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆಯೆಂದು ನನಗೆ ಮನವರಿಕೆಯಾಗಿರುತ್ತದೆ.
11. ಮೇಲಿನ ಷರತ್ತುಗಳಿಗೆ ಒಪ್ಪಿ ರೂ:100/- ರ ಛಾಪಾ ಕಾಗದದಲ್ಲಿ ಈ ಮುಚ್ಚಳಿಕೆಯನ್ನು ನೀಡುತ್ತಿದ್ದೇನೆ.

ದಿನಾಂಕ:

ಸ್ಥಳ: ಅರ್ಜಿದಾರನ ಸಹಿ ಮತ್ತು ವಿಳಾಸ